# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 544
ಸದಸ್ಯರ ಹೆಸರು : ಶ್ರೀ ಐವಾನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 13-12-2018
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕಡ್ಡಾಯ ವರ್ಗಾವಣೆ ನೀತಿಯನ್ನು ಜಾರಿಗೆ ತರುವುದನ್ನು ಶಿಕ್ಷಕರು ವಿರೋಧಿಸುವುದು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಕಡ್ಡಾಯ ವರ್ಗಾವಣೆಗೆ ಸಂಬಂಧಿಸಿದಂತೆ ತಿದ್ದುಪಡಿ ತರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| ಆ. | ಈ ವರ್ಗಾವಣೆ ನೀತಿ ಕಾನೂನು ಬಾಹಿರ ಅಲ್ಲವೇ. ಈ ಯೋಜನೆ ಹೊಂದಿರುವ ಉದ್ದೇಶವೇನು (ವಿವರ ನೀಡುವುದು). | ಇಲ್ಲ,<br>ರಾಜ್ಯದ ಗ್ರಾಮೀಣ ಭಾಗದ ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಶಿಕ್ಷಕರನ್ನು ಒದಗಿಸುವ ಮಹತ್ತರವಾದ ಆಶಯದೊಂದಿಗೆ 2007ರಲ್ಲಿ ವರ್ಗಾವಣೆ ಕಾಯ್ದೆಯನ್ನು ಜಾರಿಗೆ ತರಲಾಗಿರುತ್ತದೆ.<br>ಎಲ್ಲಾ ರೀತಿಯ ವರ್ಗಾವಣೆಗಳನ್ನು ಆನ್‌ಲೈನ್ ಕೌನ್ಸಲಿಂಗ್ ಮುಖಾಂತರವೇ ಕೈಗೊಳ್ಳಲಾಗುತ್ತಿದ್ದು, ಇದರಿಂದ ಎಲ್ಲಾ ಅರ್ಹ ಶಿಕ್ಷಕರಿಗೆ ನಿಯಮಾನುಸಾರ ಏಕ ರೀತಿಯ ಅವಕಾಶಗಳು ದೊರೆಯಲಿದ್ದು, ಯಾವುದೇ ತಾರತಮ್ಯವಿರುವುದಿಲ್ಲ. ವರ್ಗಾವಣೆ ನೀತಿಯು ಶಿಕ್ಷಕ ಸ್ನೇಹಿಯಾಗಿದೆ.<br>2017ರಲ್ಲಿ ಕಾಯ್ದೆಗೆ ತಿದ್ದುಪಡಿ ತಂದು 'ಎ' ವಲಯದಲ್ಲಿ ಅಂದರೆ ನಗರ ಪ್ರದೇಶದಲ್ಲಿಯೇ 10 ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಶಿಕ್ಷಕರಿಗೆ ಕಡ್ಡಾಯವಾ. ಗ್ರಾಮೀಣ ವಲಯ ಅಂದರೆ 'ಸಿ' ವಲಯದ ಶಾಲೆಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ ಮತ್ತು 'ಸಿ' ವಲಯದ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ 'ಎ' ವಲಯದ ಶಾಲೆಗಳಿಗೆ ವರ್ಗಾವಣೆ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಶಿಕ್ಷಕರಿಗೆ ನಿಯಮಾನುಸಾರ ವರ್ಗಾವಣೆ ಅವಕಾಶಗಳನ್ನು ಕಲ್ಪಿಸುವ ದೃಷ್ಟಿಯಿಂದ ಈ ನಿಯಮಗಳನ್ನು ಹೊಂದಲಾಗಿರುತ್ತದೆ. |
| ಇ. | ಇದರಿಂದ ಶಿಕ್ಷಕರಿಗೆ ಆಗುವ ತೊಂದರೆಗಳನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಕರ್ನಾಟಕ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ, ನಿಯಂತ್ರಣ) ಅಧಿನಿಯಮ 2007ಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

ಇಡಿ 81 ಪಿಎಂಎ 2018

[ಹೆಚ್.ಡಿ. ಕುಮಾರಸ್ವಾಮಿ]
ಮುಖ್ಯಮಂತ್ರಿ